UNIVERSITY LIBRARY
Newspaper's Agri Clippings
For more information visit University Library Website
Web - uasbagrilibindia.org
E-mail- librarian@uasbangalore.edu.in
Friday
21-08-2026

ಬೆಟ್ಟದ ನೆಲ್ಲಿಕಾಯಿ ಸಂಸ್ಕರಣೆ ತರಬೇತಿ

ಬೆಂಗಳೂರು: ಪೌಷ್ಟಿಕ, ಔಷಧೀಯ ಗುಣ ಹೊಂದಿರುವ ಬೆಟ್ಟದನೆಲ್ಲಿ ಪ್ರಮುಖ ತೋಟಗಾರಿಕೆ ಬೆಳೆ ಆಗಿದ್ದು, ಇದರ ಮೌಲ್ಯವರ್ಧನೆ- ಸಂಸ್ಕರಣೆ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸಲು 24ರಿಂದ 3 ದಿನಗಳ ತರಬೇತಿಯನ್ನು ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಆಯೋಜಿಸಿದೆ. ವಿವಿ ಕ್ಯಾಂಪಸ್ ಜಿಕೆವಿಕೆಯಲ್ಲಿ ನೀಡುವ ತರಬೇತಿಯಲ್ಲಿ ಬೆಟ್ಟದನೆಲ್ಲಿಯ ವೈಜ್ಞಾನಿಕ ಉತ್ಪಾದನಾ ತಾಂತ್ರಿಕತೆ, ಆರೋಗ್ಯ ಪ್ರಯೋಜನ, ಮೌಲ್ಯವರ್ಧನೆ ಉತ್ಪನ್ನಗಳ ಸಂಸ್ಕರಣೆ, ಬ್ರ್ಯಾಂಡಿಂಗ್, ಪ್ಯಾಕಿಂಗ್, ಮಾರುಕಟ್ಟೆ ಬಗ್ಗೆ ತಜ್ಞರು ಮಾಹಿತಿ ನೀಡಲಿದ್ದಾರೆ. ಆಸಕ್ತರು 22ರೊಳಗೆ ಹೆಸರು ನೋಂದಾಯಿಸಿಕೊಳ್ಳಬೇಕು.

ವಿಜಯವಾಣಿ ನಂ.1 ಕನ್ನಡ ದಿನಪತ್ರಿಕೆ
Bengaluru Edition
Aug 21, 2026 Page No. 9
Powered by: erelego.com

ವಿಜಯವಾಣಿ ನಂ.1 ಕನ್ನಡ ದಿನಪತ್ರಿಕೆ

ಜಿಕೆವಿಕೆ ಆವರಣದಲ್ಲಿ 'ರೈತ ಸಂತೆ' ನಾಳೆ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಕ್ಯಾಂಪಸ್ ಜಿಕೆವಿಕೆ ಆವರಣದ ಗಣಪತಿ ದೇವಸ್ಥಾನದ ಬಳಿ ಶನಿವಾರ (ಆ.22) ಬೆಳಗ್ಗೆ 7ರಿಂದ ಸಂಜೆ 4ರವರೆಗೆ ರೈತ ಸಂತೆ ನಡೆಯಲಿದೆ. ಪ್ರತಿ ತಿಂಗಳ ನಾಲ್ಕನೇ ಶನಿವಾರ ನಡೆಯಲಿರುವ ರೈತ ಸಂತೆಯಲ್ಲಿ ಈ ಬಾರಿ ಗುಲಾಬಿ ವರ್ಣದ ಸೇಬು, ಬೆಣ್ಣೆ ಹಣ್ಣು, ಅಣಬೆ, ಕಾಡು ಜೇನು, ಮಲೆನಾಡು ತುಪ್ಪ ಮಾರಾಟ ಮಾಡಲಾಗುತ್ತದೆ. ಸಾಮೆ ಕೇಕ್, ನೀರಾ, ಹಣ್ಣು-ತರಕಾರಿ, ವಿವಿಧ ಸೊಪ್ಪು, ತೋಟಗಾರಿಕೆ ಸಸಿಗಳು, ಕೃಷಿ ಉಪಕರಣ ಖರೀದಿಗೆ ಲಭ್ಯವಿರುತ್ತದೆ.